ಅವಳನ್ನು ಮುಟ್ಟುವಾಗ ನನಗೂ ಈ ಮೊದಲಿರುತ್ತಿದ್ದ ಅಮ್ಮತನದ ಬೆಚ್ಚಗಿನರಿವು ಮೂಡಲಿಲ್ಲ, ಅಥವಾ ಮೂಡಿತನಿಸಲಿಲ್ಲ... ನನ್ನ ಪೂರ್ವಗ್ರಹಗಳೇ ನನ್ನನ್ನು ಹೀಗಾಗಿಸಿದವೋ ಹೇಗೆ? ಹಿಮ್ಮೆಟ್ಟಿ ನಿಂತು, ಬಾಗಿಲಿನಲ್ಲಿದ್ದ ಪಾ–ನಿಗೆ ಆತುಕೊಂಡು ಅವಳತ್ತ ನೋಡಿದೆ. ನಿಸ್ಸೀಮ ನಿರ್ವಿಕಲ್ಪದಲ್ಲಿದ್ದಂತನ್ನಿಸಿದಳು. ತುಟಿಗಳಲ್ಲಿನ್ನೂ ಅದೇ ನಗೆಮುಗುಳು ಮಿಕ್ಕಿತ್ತು. ಒಂದು ನಮೂನೆ ಸದಾಸ್ಮಿತವದು. ಬುದ್ಧಸ್ಮಿತವೆನ್ನುವುದು ಹೆಚ್ಚು ಸರಿ. ಲೋಕಾತೀತವಾದ ಆನಂದವೆಂದರೆ ಅದೋ ಹೇಗೆ? ಗೊತ್ತಿರದೆ ನನ್ನ ಕಣ್ಣುಕ್ಕಿ ಬಂದು, ನನ್ನ ಗದ್ದಕದುಪುಗಳು ಒದ್ದೆಗೊಂಡವು.

ರೂಮಿನಿಂದ ಹೊರಬರುವಾಗ ಪಾ ಕದವೆಳೆದುಕೊಂಡು ನನ್ನೊಡನೆಯೇ ನಡೆದುಬಂದ. 'ಶಿ ಈಸ್ ಇನ್ ಎನ್ ಇನ್ಸೆನ್ಸ್ ಟ್ರಾನ್ಸ್... ಅದು ಕಳೆಯುವವರೆಗೂ ಹೀಗೇ...' ಅಂತಂದು ಅನುಭವಸ್ಥನ ಹಾಗೆ ನಕ್ಕ.

'ಮತ್ತೆ ನೀವಿಬ್ಬರೂ ಎಲ್ಲೂ ಹೊರಹೋಗೋಲ್ಲವಾ, ಪಾ?'

'ನೋ ನೋ, ವಿ ಡೂ ಗೋ... ಹೊರಗೆ ಹೋಗುತೀವಿ. ಆಗಾಗ ಶಾಪಿಂಗಿಗೆ ಹೋಗುತೀವಿ... ಒಮ್ಮೊಮ್ಮೆ ಸುಮ್ಮನೆ ಡ್ರೈವ್ ಹೋಗುತೀವಿ. ಆಗ ಯಾರಾದರೂ ಪರಿಚಯದವರು ಸಿಕ್ಕರೆ ಖುಷಿಯಿಂದ ಮಾತಾಡಿಸುತಾಳೆ. ಆದರೆ ನನ್ನೊಡನೆ ಏನೂ ಆಡೋದೇ ಮಾಡೋದೇ ನಿಂತುಹೋಗಿದೆ! ನನಗೇ ಮುಜುಗರ ಆಗುತ್ತೆ... ಎಷ್ಟು ನೆಮ್ಮದಿಯಿಂದ, ಲುಕ್... ನಾನೂ ಇವನೂ ಡಿವೋರ್ಸ್ ಮಾಡುತಿದೀವಿ. ಆದರೆ ಇಬ್ಬರೂ ಇನ್ನೂ ಫ್ರೆಂಡ್ಸ್ ಆಗಿದೀವಿ... ವಿ ಆರ್ ಲಿವಿಂಗ್ ಟುಗೆದರ್ ಅಂತ ಎಷ್ಟು ಸಲೀಸಾಗಿ ಹೇಳಿಬಿಡುತಾಳೆ ಗೊತ್ತಾ?!' ಎಂದು ವಿವರಿಸಿದ ಪಾ, ಸಣ್ಣಗೆ ವಿಷಣ್ಣವಾಗಿ ನಕ್ಕ.

ಆ ಮುಂದೆ ಹೊತ್ತು ಕಳೆಯುವುದೇ ಕಷ್ಟವಾಯಿತು. ನನ್ನ ಅಲೆದಾಟದ ದಿನಗಳನ್ನು ಪಾ–ನೊಡನೆ ಆಗಿಂದಾಗ ಹಂಚಿಕೊಳ್ಳುವುದಿದ್ದೇ ಇದ್ದಿತಷ್ಟೆ. ಎಂತಲೇ ಹೆಚ್ಚು ಮಾತನಾಡಲಾಗಲಿಲ್ಲ. ಹಾಗೆ ಮಾತನಾಡುವ ವಿಷಯವೂ ನನ್ನಲ್ಲಿರಲಿಲ್ಲ. ಇಲ್ಲಿ ನಾನಿಲ್ಲದಿರುವಾಗ, ಅನಾಮತ್ತು ಬದಲಿಹೋಗಿರುವ ಪರಿಸ್ಥಿತಿಯಲ್ಲಿ ಈ ಮುಂದೆಂತು ಏಗುವುದಂತ, ಏನು ಮಾಡುವುದಂತ ಒಮ್ಮೆಗೇ ಚಿಂತೆಯಾಯಿತು. ದೊಡ್ಡ ದೊಡ್ಡ ರಾಜಕೀಯಗಳ ಓದು, ತನಿಖೆ, ಪಿಎಚ್.ಡಿ., ಥೀಸಿಸಿತ್ಯಾದಿಯೆಂದು ಹೊಸಕಾಲದ ಜಗತ್ತನ್ನು ಕಾಡುತ್ತಿರುವ ನಿಜದ ಆತಂಕವೇನೆಂದು, ಈ ಕುರಿತು ಪ್ರೊಬುಶೋಧಗಳೆಂದು, ಮುಂದುವರೆಸಿ ಎಂಥದೋ ದೊಡ್ಡ ಸಂಶೋಧನೆಯೆಂದು... ಐದು ವರ್ಷ ಕಳೆದುಹೋಗಿದ್ದೆನಲ್ಲ, ನನ್ನ ಬುಡದಲ್ಲಿಯೇ ಉದ್ಭವಿಸಿ ಉಲ್ಬಣಗೊಂಡಿರುವ ಈ ಅತಂತ್ರವನ್ನು, ತನ್ನಿಮಿತ್ತದ ಆತಂಕವನ್ನು ಏನನ್ನುವುದು? ಹೇಗಂತ ವಿಶ್ಲೇಷಿಸುವುದು? ಅಸಲಿನಲ್ಲಿ ಈ ಜಗತ್ತಿನಲ್ಲಿ ನನ್ನೀ ಸದರಿ ಸದ್ಯಕ್ಕು ಮಿಗಿಲಾದ ಆತಂಕವಿದೆಯೆ? ಜಗದಾತಂಕವೆಂಬುದರ ದಿಟವೇ ಇದು ಹೌದೆ? ಇದ್ದಲ್ಲಿರುವ ಸಂತೋಷ ಸಾಲದೆಂದು, ಇನ್ನೆಲ್ಲೋ ಇದೆಯೆಂದು ಹುಡುಕಿ ತಡಕಿ ಮಿಡುಕಿ ಅರಸಿಕೊಂಡು ಹೋಗುವುದೇ ಇದು ತಾನೆ? ಮನುಷ್ಯಲೋಕದ ಮೂಲದಲ್ಲಿನ ಕುಟುಂಬವನ್ನೇ ಹೊಡೆದೊಡೆದು ವೈಯಕ್ತಿಕ ಘಟಕವೊಂದಾಗಿ ಘಟಿಸಿಕೊಳ್ಳುವುದು ತಾನೆ? ವಿಘಟಿಸಿಕೊಂಡಿರುವುದು ತಾನೆ?

ಹಿಂದೆಯೇ ತನ್ವಿಯ ಬಗ್ಗೆ ಯೋಚನೆಯಾಯಿತು. ಜಗತ್ತು ಬದಲಿದರೂ ತಾನು ಬದಲೆನೆಂದು ನನ್ನನಗೇ ಹೇಳಿಕೊಂಡು, ಪಾ–ನೆದುರು, ಅವಳ ಬಗ್ಗೆ ಒಂದೊಂದನ್ನೂ ನಿಧಾನವಾಗಿ ಆಡಿ ತಿಳಿಸಿದೆ. ಅವನಾದರೂ, ನಾನೆಣಿಸಿಕೊಂಡ ಹಾಗೆ ಬೆಚ್ಚಿ ಬೆರಗಿ ಹೌಹಾರಿ